# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 207 (148) |
| ಸದಸ್ಯರ ಹೆಸರು | : | ಶ್ರೀ ಬಿ.ಎಂ. ಫಾರೂಖ್<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 14-02-2023 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರಿನ ಸುರತ್ಕಲ್ ನಲ್ಲಿ ಸುಸಜ್ಜಿತ ಮಾರುಕಟ್ಟೆ ನಿರ್ಮಾಣಕ್ಕೆ ರೂ.50 ಕೋಟಿ ವೆಚ್ಚದಲ್ಲಿ ಕೆಲವರ್ಷಗಳ ಹಿಂದೆಯೇ ಆರಂಭವಾಗಿ ಪ್ರಥಮ ಹಂತದಲ್ಲಿ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಹಾಗಿದ್ದಲ್ಲಿ, ಅಪೂರ್ಣವಾದ ಯೋಜನೆಯ ವಿವರ, ವೆಚ್ಚ ಸ್ಥಗಿತವಾಗಿರುವುದಕ್ಕೆ ಕಾರಣಗಳೇನು; (ವಿವರ ನೀಡುವುದು) | ಸುರತ್ಕಲ್ ಮಾರುಕಟ್ಟೆ ನಿರ್ಮಾಣ ಕಾಮಗಾರಿಯನ್ನು ಗುತ್ತಿಗೆ ಮೊತ್ತ ರೂ.56.62 ಕೋಟಿಗಳಲ್ಲಿ ನಿರ್ವಹಿಸಲು ವಹಿಸಿದ್ದು, ಲಭ್ಯವಿದ್ದ ಭೂಪ್ರದೇಶದಲ್ಲಿ Foundation & RCC Frame structure ಕಾಮಗಾರಿಯನ್ನು ಕೈಗೊಳ್ಳಲಾಗಿರುತ್ತದೆ. ಅಪೂರ್ಣವಾದ ಭಾಗಶಃ ಕೈಗೊಂಡಿದ್ದ ಕಾಮಗಾರಿಗೆ ರೂ.1675.04 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.<br><br>ಕಾಮಗಾರಿ ಸ್ಥಗಿತವಾಗಿರುವುದಕ್ಕೆ ಈ ಕೆಳಕಂಡ ಕಾರಣಗಳನ್ನು ನೀಡಲಾಗಿದೆ.<br><br>• ಕಂದಾಯ ಇಲಾಖೆಯವರಿಗೆ ಸೇರಿದ 0.35 ಎಕರೆ ಪ್ರದೇಶದಲ್ಲಿದ್ದ ನಾಡಕಛೇರಿ ಕಟ್ಟಡವನ್ನು ಮಂಗಳೂರು ಮಹಾನಗರಪಾಲಿಕೆಗೆ ಸೇರಿದ ಸುರತ್ಕಲ್ ಹಳೆ ಪೊಲೀಸ್ ಠಾಣೆ ಇದ್ದ ಕಟ್ಟಡಕ್ಕೆ ಸ್ಥಳಾಂತರಿಸಲು ಕ್ರಮ ಕೈಗೊಂಡ ತರುವಾಯ ನಾಡಕಛೇರಿ ಕಟ್ಟಡವನ್ನು ನವೆಂಬರ್ 2018 ರಲ್ಲಿ ತೆರವುಗೊಳಿಸಿಕೊಡಲಾಗಿರುತ್ತದೆ.<br><br>• ಕೃಷಿ ಇಲಾಖೆಯವರಿಗೆ ಸೇರಿದ 0.10 ಎಕರೆ ಸ್ಥಳದಲ್ಲಿರುವ ರೈತ ಸಂಪರ್ಕ ಕೇಂದ್ರ ತೆರವು ಬಗ್ಗೆ ಸುರತ್ಕಲ್ ವಲಯ ಕಛೇರಿ ಇರುವ ನಿವೇಶನದಲ್ಲಿ 0.10 ಎಕರೆ ಮೀಸಲಿರಿಸಿ ಹೊಸದಾಗಿ ನೆಲ, ಪ್ರಥಮ, ದ್ವಿತೀಯ ಮಹಡಿ ಹೊಂದಿರುವ ಹೊಸ ರೈತ ಸಂಪರ್ಕ ಕೇಂದ್ರ ಕಟ್ಟಡವನ್ನು ಮಂಗಳೂರು ಮಹಾನಗರಪಾಲಿಕೆಯಿಂದ ನಿರ್ಮಿಸಿದ ನಂತರ ಕೃಷಿ ಇಲಾಖೆಯವರು ಫೆಬ್ರವರಿ 2021ರಲ್ಲಿ ಸ್ಥಳಾಂತರಗೊಂಡಿರುತ್ತಾರೆ. ಈ ಜಾಗವು ಫೆಬ್ರವರಿ 2021 ರಲ್ಲಿ ಲಭ್ಯವಾಗಿರುತ್ತದೆ. |

| | | |
|---|---|---|
| | | • ಮೂಡಾ ಮಾರುಕಟ್ಟೆ ಮಳಿಗೆಗಳ ಸ್ಥಳಾಂತರ ಬಗ್ಗೆ, ಹೊಸದಾಗಿ ನಿರ್ಮಾಣ ಆಗುತ್ತಿರುವ ಮಾರುಕಟ್ಟೆಯ ಪಶ್ಚಿಮ ಭಾಗದಲ್ಲಿ ಒಟ್ಟು 61 ಮಳಿಗೆಗಳ ತಾತ್ಕಾಲಿಕ ಮಾರುಕಟ್ಟೆ ನಿರ್ಮಾಣದ ಕಾಮಗಾರಿ ಮಾರ್ಚ್ 2021 ರಿಂದ ಪ್ರಗತಿಯಲ್ಲಿರುತ್ತದೆ. ಈ ಮಾರುಕಟ್ಟೆ ಸ್ಥಳಾಂತರದಿಂದ 0.68 ಎಕರೆ ಪ್ರದೇಶವು ನಿರ್ಮಾಣಕ್ಕೆ ಲಭ್ಯವಾಗುತ್ತದೆ.<br>• ನಿವೇಶನ ಮಧ್ಯದಲ್ಲಿ ಹಾಲಿ ಒಳಚರಂಡಿ ಜಾಲ ಹಾದುಹೋಗಿದ್ದು ಇದರಿಂದಾಗಿ ಕಟ್ಟಡ ನಿರ್ಮಾಣಕ್ಕೆ ಅಡ್ಡಿಯಾಗಿರುತ್ತದೆ. ಆದುದರಿಂದ ಸದ್ರಿ ಒಳಚರಂಡಿ ಜಾಲವನ್ನು ನಿವೇಶನದ ಹೊರ ಭಾಗದಲ್ಲಿ ಹಾದು ಹೋಗುವಂತೆ ಹೊಸ ಒಳಚರಂಡಿ ಜಾಲ ನಿರ್ಮಾಣ ಮಾಡಬೇಕಾಗಿದ್ದುದರಿಂದ ನಿರ್ಮಾಣ ಕಾಮಗಾರಿ ವಿಳಂಬವಾಗಿರುತ್ತದೆ.<br>• ಮೇಲಿನ ಕಾರಣಗಳಿಂದಾಗಿ, ಸುರತ್ಕಲ್ ಮಾರುಕಟ್ಟೆ ಕಟ್ಟಡ ಕಾಮಗಾರಿ ವಿಳಂಬವಾಗಿದ್ದು, ಬಾಕಿ ಇರುವ ಕಾಮಗಾರಿಗಳನ್ನು ಮುಂದುವರೆಸಲು ದರಗಳು ಏರಿಕೆಯಾಗಿರುವುದರಿಂದ ಲೋಕೋಪಯೋಗಿ ಇಲಾಖೆಯ 2015-16ನೇ ಸಾಲಿನ ದರಪಟ್ಟಿಗಳ ಬದಲಾಗಿ ಹಾಲಿ 2018-19ರ ಸಾಲಿನ ಲೋಕೋಪಯೋಗಿ ಇಲಾಖೆ, ಮಂಗಳೂರು ವೃತ್ತದ ದರಪಟ್ಟಿಗಳ ದರಗಳನ್ನು ಜಿ.ಎಸ್.ಟಿ.ಯೊಂದಿಗೆ ನೀಡುವಂತೆ ಗುತ್ತಿಗೆದಾರರು ಕೋರಿರುತ್ತಾರೆ. ಈ ಕುರಿತು ಸಚಿವ ಸಂಪುಟದ ತೀರ್ಮಾನದಂತೆ ಬಾಕಿ ಉಳಿದಿರುವ ಕಾಮಗಾರಿಗೆ ಚಾಲ್ತಿ ದರಪಟ್ಟಿಯಂತೆ, ನೂತನವಾಗಿ ಟೆಂಡರ್ ಆಹ್ವಾನಿಸಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಿದ್ದು ಕ್ರಮವಹಿಸಲಾಗುತ್ತಿದೆ. |
| ಇ) | ಸದರಿ ಯೋಜನೆಯನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸುವ ಬಗ್ಗೆ ಸರ್ಕಾರದ ಕ್ರಮಗಳೇನು; | ಸರ್ಕಾರದ ಆದೇಶ ಸಂಖ್ಯೆ: ನಅಇ 446 ಎಸ್.ಎಫ್.ಸಿ 2021, ದಿನಾಂಕ:31-12-2022ರಲ್ಲಿ ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಸುರತ್ಕಲ್ ಮಾರುಕಟ್ಟೆ ಸಂಕೀರ್ಣ ಕಟ್ಟಡದ ನಿರ್ಮಾಣ ಯೋಜನೆಯ ಪರಿಷ್ಕೃತ ಅಂದಾಜು ಮೊತ್ತ ರೂ.8200 ಲಕ್ಷಗಳಿಗೆ ಹೆಚ್ಚಿಸಿ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಈ ಹಿಂದೆ ನಿರ್ವಹಿಸಿದ ರೂ.1675.04ಲಕ್ಷಗಳ ವೆಚ್ಚವನ್ನು ಕಳೆದು ಉಳಿದ ರೂ.6524.96ಲಕ್ಷಗಳ ಬಾಕಿ ಇರುವ ಕಾಮಗಾರಿಯನ್ನು ಚಾಲ್ತಿ ದರಪಟ್ಟಿಯಂತೆ ಹೊಸದಾಗಿ ಟೆಂಡರ್ ಆಹ್ವಾನಿಸಿ, ಅನುಷ್ಠಾನಗೊಳಿಸಲು ಸರ್ಕಾರವು ಅನುಮೋದನೆ ನೀಡಿ ಆದೇಶಿಸಿದೆ. ಸರ್ಕಾರದ ಪತ್ರ ಸಂಖ್ಯೆ:ನಅಇ 446 ಎಸ್.ಎಫ್.ಸಿ 2021, ದಿನಾಂಕ: 18-01-2023 ರಲ್ಲಿ ಸದರಿ ಬಾಕಿ ಉಳಿದಿರುವ ಕಾಮಗಾರಿಯು ರೂ.50.00 ಕೋಟಿಗಳಿಗಿಂತ ಹೆಚ್ಚಿಗೆ ಇರುವುದರಿಂದ, ರಾಜ್ಯ ಟೆಂಡರ್ ಪೂರ್ವ ಪರಿಶೀಲನಾ ಸಮಿತಿಗೆ ಅಂದಾಜು ಪಟ್ಟಿ ಮತ್ತು ಟೆಂಡರ್ ದಸ್ತಾವೇಜು ಮಂಡಿಸಲಾಗಿರುತ್ತದೆ. ರಾಜ್ಯ ಟೆಂಡರ್ ಪೂರ್ವ ಪರಿಶೀಲನಾ ಸಮಿತಿಯು ಪತ್ರ ಸಂಖ್ಯೆ: ನಂ. ಎಸ್.ಪಿ.ಟಿ ಎಸ್.ಸಿ/ಎಮ್.ಎನ್.ಪಿ/ಸುರತ್ಕಲ್ ಮಾರ್ಕೆಟ್ ಕಾಂಪ್ಲೆಕ್ಸ್/ಎಫ್-170/ 2022-23, ದಿನಾಂಕ:31-01-2023ರಲ್ಲಿ ಸಲಹೆ ಮತ್ತು ಶಿಫಾರಸ್ಸಿನಂತೆ ಟೆಂಡರ್ ಕರೆಯುವ ಮೊದಲು ಅನುಪಾಲನಾ ವರದಿಯನ್ನು ರಾಜ್ಯ ಟೆಂಡರ್ ಪೂರ್ವ ಪರಿಶೀಲನಾ ಸಮಿತಿಗೆ ಸಲ್ಲಿಸಲು ಸೂಚಿಸಿದೆ. ಸದರಿ ಸಮಿತಿಗೆ ಅನುಪಾಲನಾ ವರದಿ ಸಲ್ಲಿಸಿ ಟೆಂಡರ್ ಕರೆಯಲು ಕ್ರಮವಹಿಸಲಾಗುತ್ತದೆ. |

| | | |
|---|---|---|
| ಈ) | ಸಾರ್ವಜನಿಕ ಮೈದಾನದಲ್ಲಿ ನಡೆಯುತ್ತಿರುವ ಮಾರುಕಟ್ಟೆಯಿಂದ ಮಕ್ಕಳಿಗೆ ಆಟವಾಡಲು ಹಾಗೂ ಸಾರ್ವಜನಿಕ ಸಮಾರಂಭಗಳಿಗಾಗಿ ಇರುವ ಈ ಮೈದಾನವನ್ನು ಶೀಘ್ರ ಪೂರ್ಣಗೊಳಿಸಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಮಾಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ? | ಸುರತ್ಕಲ್ ಮಾರುಕಟ್ಟೆ ಕಾಮಗಾರಿ ಮುಕ್ತಾಯಗೊಂಡ ನಂತರ ಸಾರ್ವಜನಿಕರ ಮೈದಾನದಲ್ಲಿ ನಡೆಯುತ್ತಿರುವ ಮಾರುಕಟ್ಟೆಯನ್ನು ಹೊಸ ಮಾರುಕಟ್ಟೆಗೆ ಸ್ಥಳಾಂತರಿಸಿ ಈ ಮೈದಾನವನ್ನು ಮುಕ್ತಗೊಳಿಸಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ. |

ಸಂಖ್ಯೆ:ನಅಇ 47 ಎಸ್‌ಎಫ್‌ಸಿ 2023

**(ಬಿ.ಎ ಬಸವರಾಜ)**
ನಗರಾಭಿವೃದ್ಧಿ ಸಚಿವರು